# ಆಹಾ ಸುದ್ದಿ!

★ ಸಸಿತೋಟ

ಇಂಡೋನೇಷ್ಯಾದಲ್ಲಿ ಅಸ್ಥಿಪಂಜರಗಳೂ ವರ್ಷಕ್ಕೊಮ್ಮೆ ಮಜ್ಜನಸುಖ ಅನುಭವಿಸುತ್ತವಂತೆ. ಅಲ್ಲಿಯ ಜನಾಂಗವೊಂದರಲ್ಲಿ ಹೂತಿಟ್ಟ ಶವದ ಅವಶೇಷ ತೆಗೆದು ಸ್ನಾನ ಮಾಡಿಸಿ ಹೊಸ ಸೂಟ್ ತೊಡಿಸಿ ಸಿಂಗಾರ ಮಾಡುವ ಸಂಪ್ರದಾಯವಿದೆಯಂತೆ. ಸೂಟ್ ಬೂಟ್ ಕಿ.. ಅಲ್ಲಿ ಸ್ವರ್ಗ– ನರಕಕ್ಕೂ ವ್ಯಾಪಿಸಿದೆ ಅಂತಾಯ್ತು.



ಜಪಾನಿನ ಇಕುಮೆನ್ ವಿಶ್ವವಿದ್ಯಾನಿಲಯ ಅಲ್ಲಿಯ ಅವಿವಾಹಿತ ಪುರುಷರಿಗೆ ಶಿಶು ಪಾಲನೆ ಕೋರ್ಸ್ ನಡೆಸುತ್ತಿದೆಯಂತೆ. ಅಲ್ಲಿಯ ಉದ್ಯೋಗಗಳೆಲ್ಲ ಪುರುಷ ಕೇಂದ್ರೀಕೃತವಾಗಿದ್ದು, 35 ವರ್ಷದೊಳಗಿನ ಶೇ. 70ರಷ್ಟು ಮಂದಿ ಮದುವೆಯೆಂದರೆ ಇಲಿ ಬೆಕ್ಕು ಕಂಡ ಹಾಗೇ ಓಡುವರಂತೆ. ಈ ಮೊದಲು ಹುಡುಗಿಯ ಜೊತೆ ಸುತ್ತಾಡುವುದಕ್ಕಿಂತ ಉದ್ಯೋಗವೇ ಹೆಚ್ಚು ಖುಷಿ ಕೊಡುತ್ತದೆ ಎನ್ನುತ್ತಿದ್ದವರು ಕೋರ್ಸ್ ಮಾಡಿದ ಮೇಲೆ ಹೆಂಡತಿಗಿಂತ ಮಗು ಹೆಚ್ಚು ಸಂತಸ ನೀಡುತ್ತದೆ ಎನ್ನುತ್ತಿದ್ದಾರಂತೆ. ಇನ್ನು ಯಾವ ಹೊಸ ಕೋರ್ಸ್ ಹುಡುಕುತ್ತಾರೋ!




ಸದರ್ನ್ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ ಹೊಸದಾಗಿ ನೇಮಿಸಿಕೊಂಡಿರುವ ಪ್ರೊ.ಟೈರ್‌ಬೈಟರ್. ಇತರ ಪ್ರೊಫೆಸರ್‌ಗಳ ಪಾಠ ಕೇಳಿ ಹೆಚ್ಚಿಸಿಕೊಂಡ ಒತ್ತಡವನ್ನು ಈ ನಾಯಿ ಕಡಿಮೆ ಮಾಡುತ್ತದಂತೆ. ಸದ್ಯ ವಿವಿಯ ಆರೋಗ್ಯ ಕೇಂದ್ರದಲ್ಲಿರುವ ಇದು ತನ್ನ ಸಮವಸ್ತ್ರವನ್ನು ಕೂಡಾ ಸರಿ ಇಟ್ಟುಕೊಳ್ಳದೇ ತಾನೇ ಶಿಸ್ತಿನ ಪಾಠ ಹೇಳಿಸಿಕೊಳ್ಳುತ್ತಿದೆಯಂತೆ.



ಥಾಯ್ಲೆಂಡ್‌ನಲ್ಲಿ ಹಕ್ಕಿಗಳ ವಾರ್ಷಿಕ ಸಂಗೀತ ಸ್ಪರ್ಧೆ ನಡೆಯುತ್ತಿದೆ. ಥಾಯ್ಲೆಂಡ್ ಮಾತ್ರವಲ್ಲದೇ, ಸಿಂಗಪುರ, ಮಲೇಷ್ಯಾದಿಂದಲೂ ಸಾಕಷ್ಟು ಸ್ಪರ್ಧಿಗಳು ಬಂದಿವೆಯಂತೆ. ಗೆಲ್ಲಲಿ, ಸೋಲಲಿ ಕಣ್ಣೀರು ಸುರಿಸುವವರು ಮಾತ್ರ ಪಂಜರದ ಹೊರಗಿರುವವರು.



ಛಾವಣಿ ಏರುವ ಹವ್ಯಾಸದ ರಷ್ಯಾದ ಈ ಹುಡುಗಿ ಏಂಜೆಲಿನಾ ನಿಕೊಲಾವ್ ಗಗನಚುಂಬಿಗಳನ್ನು ಹತ್ತುವುದಲ್ಲದೇ ಅಂಚಿನಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಾಳಂತೆ. ಒಂದು ಎಡವಟ್ಟು ನಡೆ, ಒಂದು ಗಾಳಿಯ ಹೊಡೆತ ಈಕೆ ಮತ್ತೆ ಇನ್‌ಸ್ಟಾಗ್ರಾಮಿನಲ್ಲಿ ಫೋಟೊ ಹಾಕದಂತೆ ಮಾಡಿಬಿಡಬಹುದು ಎಂದು ಸಾಕಷ್ಟು ಮಂದಿ ಜಾಲತಾಣದಲ್ಲಿ ಬಾಣ ಬಿಡುತ್ತಿದ್ದಾರಂತೆ. ಆದರೇನು, ಈ ಏಂಜೆಗೆ ಅಂಜಿಕೆಯೇ ಇಲ್ಲವೇನೋ!

ಈ ಬಾರಿಯ ಇಗ್‌ನೊಬೆಲ್ ಪ್ರಶಸ್ತಿಯನ್ನು ಇತ್ತೀಚೆಗೆ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ವಿತರಿಸಲಾಯಿತು. ಕೈರೋದ ದಿವಂಗತ ಪ್ರೊಫೆಸರ್ ಒಬ್ಬರಿಗೆ ಕೂಡಾ ಪ್ರಶಸ್ತಿ ಸಂದಿತು. ಅವರು ಇಲಿಗಳು ಯಾವ ಬಟ್ಟೆಯ ಪ್ಯಾಂಟ್ ತೊಟ್ಟರೆ ಅವುಗಳ ಲೈಂಗಿಕ ಜೀವನ ರೋಮಾಂಚನಕಾರಿಯಾಗಿರುತ್ತದೆ ಎನ್ನುವುದರ ಮೇಲೆ ಸಂಶೋಧನೆ ನಡೆಸಿದ್ದರಂತೆ. ಪಾಲಿಯೆಸ್ಟರ್ ಪ್ಯಾಂಟ್‌ನಿಂದ ಅವುಗಳು ಹೆಣ್ಣು ಇಲಿಗಳಿಗೆ ಭಾರಿ ಬೋರ್ ಎನಿಸುತ್ತವಂತೆ. ಪ್ಯಾಂಟ್ ಅಳತೆ ಹೇಗೆ ತೆಗೆದುಕೊಂಡರೋ, ಪ್ಯಾಂಟ್ ಹಾಕಿ, ತೆಗೆದು ಮಾಡಲು ಆ ಮೂಷಿಕಗಳು ಕಲಿತವೋ ಇಲ್ಲವೋ ಎಂಬುದನ್ನು ಪ್ರೊಫೆಸರ್ ಸಾಹೇಬರು ವಿವರಿಸಿಲ್ಲವಂತೆ.